ವರ್ಷ	ಅನುದಾನ (ಕೋಟಿ ರೂ.ಗಳಲ್ಲಿ)	ಮಾಡಿದ ಖರ್ಚು
1983-84	55.57	50.39
1984-85	80.95	67.01
1985-86	78.88	81.78
1986-87	87.45	86.10
1987-88	119.41	63.36
1988-89	92.37	69.78
1989-90	119.86	91.95
1990-91	124.44	102.68

ಆ) 8,68,191 ಎಕರೆಗಳು.

ಇ) 8,91,195 ಎಕರೆಗಳು.

ರಾಜ್ಯದ ಜಲ ಸಂಪನ್ಮೂಲದ ರಕ್ಷಣೆ

2040 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) ರಾಜ್ಯದ ಜಲ ಸಂಪನ್ಮೂಲವನ್ನು ರಕ್ಷಣೆ ಮಾಡಲು ರಾಜ್ಯ ಸರ್ಕಾರವು ನಿರ್ಧರಿಸಿದೆಯೆ?

ಆ) ಹಾಗಿದ್ದಲ್ಲಿ, ಯಾವ ರೀತಿ ರಕ್ಷಣೆ ಮಾಡಲಾಗುತ್ತಿದೆ: (ವಿವರಗಳನ್ನು ಒದಗಿಸುವುದು)?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು)

ಅ) ,ಆ) ರಾಜ್ಯದ ಜಲಂಪನ್ಮೂಲವನ್ನು ರಕ್ಷಣೆ ಮಾಡಲು ಯಾವ ಕಾರ್ಯಕ್ರಮವು ಇಲ್ಲ, ಆದರೆ ಈ ಜಲಸಂಪನ್ಮೂಲದಲ್ಲಿ ರಾಜ್ಯದ ನೀರಿನ ಪಾಲನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಲು ಸಮಗ್ರ ಯೋಜನೆಯನ್ನು ಹಾಕಿಕೊಳ್ಳಲಾಗಿದೆ. ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ಅವಲಂಭಿಸಿ ಸಮಗ್ರ ಯೋಜನೆಯ ಪ್ರಕಾರ ರೂಪಿಸಿರುವ ಎಲ್ಲಾ ಯೋಜನೆಗಳನ್ನು ನಿಯಮಿತ ಅವಧಿಯೊಳಗೆ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ವಿವಿಧ ಅಕಾಡೆಮಿಗಳಿಗೆ ಅಧ್ಯಕ್ಷರನ್ನು ನೇಮಿಸುವುದು

2041 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಯುವಜನ ಕ್ರೀಡೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) ರಾಜ್ಯದ ವಿವಿಧ ಅಕಾಡೆಮಿಗಳಿಗೆ ಅಧ್ಯಕ್ಷರನ್ನು ನೇಮಿಸಲು ಸರ್ಕಾರ ಏಕೆ ವಿಳಂಬ ಮಾಡುತ್ತಿದೆ?

ಆ) ಅವುಗಳಿಗೆ ಯಾವಾಗ ಅಧ್ಯಕ್ಷರನ್ನು ನೇಮಿಸಲಾಗುವುದು?

ಇ) ಅಕಾಡೆಮಿಗಳಿಗೆ ಸ್ವಾಯತ್ತತೆ ಕೊಡಲು ಸರ್ಕಾರ ನಿರ್ಧರಿಸಿದೆಯೆ?